## ಕಳೆದ ಸಂಚಿಕೆಯಲ್ಲಿ

ದೇವಪ್ಪನ ಮದುವೆ ಗೊತ್ತಾದ ಹುಡುಗಿ ಮೊದಲು ಆತನನ್ನು ನಿರಾಕರಿಸುವಂತೆ ಕಂಡರೂ ಆಮೇಲೆ ಪ್ರೀತಿಯ ಹೊಳೆಯನ್ನೇ ಹರಿಸುತ್ತಾಳೆ. ವಿರಹ ತಾಳದೆ, ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಬಾಂಧವ್ಯ ಬೆಳೆಯುತ್ತದೆ. ಮದುವೆಗೆ ನೀರಿನಂತೆ ಹಣ ಖರ್ಚು ಮಾಡುತ್ತಾನೆ, ಮಡದಿ ಅನುಸೂಯಗೆ ದುಬಾರಿಯಾದ ಐದು ಸೀರೆ ಕೊಡಿಸುತ್ತಾನೆ ದೇವಪ್ಪ. ಅನುಸೂಯ ಅದೃಷ್ಟದ ಬಗ್ಗೆ ಎಲ್ಲರೂ ಮಾತಾಡಲಾರಂಭಿಸುತ್ತಾರೆ. ಆದರೆ ಇವರ ಚಾದಂಗಡಿ ಪಕ್ಕದಲ್ಲೇ ಇರುವ ಮಲ್ಲವ್ವತ್ತೆಗೆ ಮಾತ್ರ ಇವರ ಪ್ರೇಮ ತೊಂದರೆ ಎನಿಸತೊಡಗುತ್ತದೆ. ದೇವಪ್ಪ–ಅನುಸೂಯ ಬೇರೆ ಮನೆ ಮಾಡುತ್ತಾರೆ. ಇದು ಮಲ್ಲವ್ವತ್ತೆಗೆ ನುಂಗಲಾರದ ತುಪ್ಪವಾಗಿ ಪರಿಣಮಿಸುತ್ತದೆ.



ಮಲಗಿ ಬಹಳ ಸಮಯವಾಗಿರಲಿಲ್ಲ. ಯಾರೋ ಎಬ್ಬಿಸಿದಂತಾಯಿತು. ಬದನೆಕಾಯಿ ಹಾಗೂ ಆಲೂಗೆಡ್ಡೆ ಪಲ್ಯ ಮಾಡುತ್ತಿದ್ದ ಶಂಕರಪ್ಪ ದೇವಣ್ಣನನ್ನು ಎಬ್ಬಿಸಲು ಪ್ರಯತ್ನಿಸಿ, ಸೋತು ಕೊನೆಯ ಉಪಾಯವೆಂಬಂತೆ ಮುಖಕ್ಕೆ ತುಸು ನೀರು ಗೊಜ್ಜಿದ. ದೇವಣ್ಣ ಸಿಟ್ಟಿನಿಂದಲೇ ಎದ್ದ.

‘ಇದೇ ಈಗ ಮಲಕೊಂಡಿದ್ದು ಕಾಣಂಗಿಲ್ಲೇನು? ಏನೋ ಶಂಕ್ರಣ್ಣ, ಬದ್ನಿಕಾಯಿ ಪಲ್ಯೆ ಮಾಡಲಿಕ್ಕೂ ನಾನೇ ಬರಬೇಕೇನು?’

‘ಅದಕ್ಕ ಎಬ್ಬಿಸಲಿಲ್ಲೋ ದ್ಯಾವಣ್ಣ. ಊರಿಂದ ಯಾರೋ ಬಂದು ನಿನ್ನ ಅರ್ಜಂಟ್ ಎಬ್ಬಿಸಬೇಕಂತ ನಿಂತಾರ. ಅವರು ಬಂದು ತಾಸಿನ ಮೇಲಾತು. ಒಂದೇ ಸಮನೆ ಗಂಟುಬಿದ್ದಾರ.’

‘ಮಲ್ಲೂರಿನಿಂದಾ? ಯಾರು? ಯಾರು ಬಂದಾರ? ಏನು?’

‘ದೇವಣ್ಣ, ನಾನು ಮಲ್ಲಪ್ಪ, ದಿನ್ನಿಮನಿ ಮಲ್ಲಪ್ಪ. ಗೊತ್ತಾತೇನು?’

‘ಹೂಂ. ಗೊತ್ತಾತು. ಹೇಳು. ಏನು ಮಲ್ಲು, ಇಷ್ಟು ನಸುಕಿಲೆ ಬಂದಿದೀ.’

‘ದುಂಡಪ್ಪಕಾಕಾ ನಿನ್ನ ಅರ್ಜಂಟ್ ಊರಿಗೆ ಕರಕೊಂಡು ಬರಾಕ ನನ್ನ ಕಳಿಸ್ಯಾನ. ಈಗಿಂದೀಗ ಹೊರಡಬೇಕು.’

‘ಏನು? ಈಗಿಂದೀಗ? ಹುಡುಗಾಟಿಕೆ ಏನು? ಎದಕ್ಕಂತ? ನಾ ಇಲ್ಲಿ ಮದುವಿ ಊಟದ್ದು ಹೊಂದಿಸಿಕೊಂಡಿದ್ದು ಐತಿ. ನಿಂತ ಕಾಲ ಮ್ಯಾಲ ಬಾ ಅಂದ್ರ ಹೆಂಗ ಬರ್ತಾರು? ನಾಳೆ ಬರ್ತೇನಿ. ಅಷ್ಟು ಹೇಳು. ಅಂಥಾದ್ದೇನು ಅರ್ಜಂಟ್?’

‘ಅರ್ಜಂಟ್ ಐತಿ ದೇವಣ್ಣ. ನಿಮಗಿದನ್ನು ಹೆಂಗ ತಿಳಿಸೋದಂತೇನಿ. ನಿಮ್ಮ ಚಾದಂಗಡಿ ಬಾಜೂ ಕೊಲೆ ಆಗೇತಿ.’

‘ಹಾಂ. ಕೊಲೆ ಆಗೇತಿ! ಯಾರ ಕೊಲೆನೋ? ಇದೇನು ಹೇಳಾಕಹತ್ತೀಯೋ ಮಲ್ಲಣ್ಣ?’

‘ಹೌದೊ ದೇವಣ್ಣ, ಕಂಡಕ್ಟರ್ ಸುಭಾಸಂದು ಕೊಲೆ ಆಗೇತಿ. ನಿನ್ನೆ ಮಧ್ಯಾಹ್ನನ ನಡೆದೇತಿ. ನಿಮ್ಮ ಆಳು ದುರ್ಗಪ್ಪ ಅದಾನಲ್ಲ, ಅವ ಕಂಡಕ್ಟರಗೆ ಕುಡುಗೋಲು ಬೀಸ್ಯಾನ. ಚಾದಂಗಡಿ ಮುಂದ ಮಾತಾಡ್ತಾ ನಿಂತಾಗ ಏನೋ ವಿಷಯಕ್ಕ ಜಗಳ ಸುರುವಾಗಿ ಒಬ್ಬರಿಗೊಬ್ಬರು ಹೊಡೆದಾಡ್ಯಾರ. ಸಾಲದ ಸಲುವಾಗಿನ ಗದ್ದಲ ಕೊಲೆಯೊಳಗ ಮುಕ್ತಾಯ ಆಗೇತಿ. ಕಣ್ಣು ಮುಚ್ಚಿ ಕಣ್ಣು ತೆಗೆಯೋದರೊಳಗ ಎಲ್ಲಾ ನಡೆದುಹೋಗೇತಿ. ಹೊಟೇಲ್ ಪಕ್ಕ ಹಾಳು ಜಾಗ ಇತ್ತಲ್ಲ? ಒಬ್ಬರಿಗೊಬ್ಬರು ದೂಡ್ತಾ ಕೆಳಗ ಬಿದ್ರು. ಅಲ್ಲಿ ಕಲ್ಲು, ಮುಳ್ಳು ಏನೇನೊ ಇದ್ದುವಲ್ಲ? ದುರ್ಗಪ್ಪನ ತಲೆಗಿ ಕಲ್ಲು ಬಡಿದು ರಕ್ತ ಬಂದೇತಿ. ಅಂವ ತಿರುಗಿ ಸಿಟ್ಟಿನ್ಯಾಗ ಕಂಡಕ್ಟರನ ಕುತ್ತಿಗಿಗಿ ಕುಡುಗೋಲು ಬೀಸ್ಯಾನ. ಕಂಡಕ್ಟರ್ ಕೆಳಗ ಬಿದ್ದಾಂವ ಮ್ಯಾಲ ಏಳಲಿಲ್ಲ. ದುರ್ಗಪ್ಪನ ತಲೆಗೂ ಬಾಳ ಪೆಟ್ಟಾಗೇತಿ. ಯಾರೋ ಪೋಲಿಸರಿಗೆ ತಿಳಿಸಿದರು. ಎರಡು ಪೋಲಿಸ್ ಗಾಡಿ ಬಂದ್ವು. ಪಂಚನಾಮೆ ಮಾಡಿ ಕಂಡಕ್ಟರ್ನ ಹೆಣಾ ಬೈಲಹೊಂಗಲಕ್ಕ ಪೋಸ್ಟಮಾರ್ಟಮ್‌ಗೆ ತಗೊಂಡು ಹೋದ್ರು. ನಿನ್ನೆ ರಾತ್ರಿ ಅವರ ಊರು ಹೊಸೂರುದಾಗ ಮಣ್ಣಾತಂತ. ದುರ್ಗಪ್ಪಗ ಸರಕಾರಿ ದವಾಖಾನಿಗೆ ಹಾಕ್ಯಾರ. ಅಂವಗೂ ಸೀರಿಯಸ್ ಐತಿ. ನಿನ್ನೆ ಸಾಯಂಕಾಲ ಅನಸವ್ವನ್ನೂ ಪೋಲಿಸ ಸ್ಟೇಷನ್ನಿಗೆ ಕರಕೊಂಡು ಹೋಗ್ಯಾರ.’

‘ಹಾಂ. ಏನೋ ಇದು? ದೊಡ್ಡ ಘಾತ ಆತು...’ ದೇವಣ್ಣನಿಗೆ ತಾನು ನಿಂತಿದ್ದ ಭೂಮಿ ಗರ್ರನೆ ತಿರುಗಿದಂತಾಯಿತು. ಅವನು ಗಳಗಳ ಅಳತೊಡಗಿದ.

***

ಇಂತಹ ಒಂದು ಭಯಾನಕ ಘಟನೆ ಮಲ್ಲೂರಿನಲ್ಲಿ ಮಟಮಟ ಮಧ್ಯಾಹ್ನವೇ ನಡೆದುಹೋಯಿತು. ಎಲ್ಲ ಸುರಳೀತ ನಡೆದಿರುವಾಗ ಬೃಹತ್ ಭೀತಿಯೊಂದು ಎದ್ದು ನಿಂತಿತು. ಮಲ್ಲೂರು ದಿಗಿಲಿಗೆ ಬಿದ್ದಿತು. ಎಲ್ಲರ ಮನಸ್ಸಿನಲ್ಲಿ ಕ್ಷೋಭೆಕೋಲಾಹಲವೆದ್ದಿತು. ಒಂದು ಕ್ಷಣ ಎಲ್ಲರ ಕೈಕಾಲು ತಣ್ಣಗಾದವು. ಯಾಕಾದರೂ ಈ ಕೊಲೆ ನಡೆಯಿತು? ಉಗುರಿನಿಂದ ಚಿವುಟಿ ಹಾಕಬಹುದಾಗಿದ್ದಕ್ಕೆ ಈ ಹುಚ್ಚ ದುಗ್ರ್ಯಾ ಕೊಡಲಿಯನ್ನೇಕೆ ತೆಗೆದುಕೊಂಡ? ಸಿಟ್ಟಿನ ಕೈಗೆ ಬುದ್ಧಿ ಕೊಟ್ಟು ಭೀಕರ ಕೃತ್ಯವನ್ನೆಸಗಿದ. ಪಾಪ, ಕಂಡಕ್ಟರನನ್ನು ಕೊಲ್ಲುವುದರ ಜೊತೆಗೆ ಊರಿನ ನೆಮ್ಮದಿಗೂ ಸಂಚಕಾರ ತಂದ. ಅವನಿಗೆ ಸ್ವಲ್ಪವಾದರೂ ಬುದ್ಧಿ ಬೇಡವೆ? ಮಣಗಟ್ಟಲೆ ಕೆಲಸ ಮಾಡುತ್ತಿದ್ದ ಎನ್ನುವುದನ್ನು ಬಿಟ್ಟರೆ ಆತ ಯಾವಾಗಲೂ ಇಂತಹ ದುರಾಚಾರವನ್ನೇ ಮಾಡುತ್ತ ಬಂದಿದ್ದಾನೆ. ಹಾಗಾಗಿಯೇ ಅನಸವ್ವನಿಗೆ ದುರ್ಗನನ್ನು ಕಂಡರೆ ಆಗುತ್ತಿರಲಿಲ್ಲ. ಆತ ಕಂಡಕ್ಟರನನ್ನು ಹತ್ಯೆ ಮಾಡುವುದೇ ಆಗಿದ್ದರೆ ಬಸ್ಸಿನಲ್ಲಿದ್ದಾಗ ಮಾಡಬಾರದಾಗಿತ್ತೆ? ಕಂಡಕ್ಟರನ ಊರು ಹೊಸೂರಿಗೆ ಹೋಗಿ ಮಾಡಬಾರದಾಗಿತ್ತೆ? ಬೈಲಹೊಂಗಲದ ಬಸ್‌ಸ್ಟ್ಯಾಂಡಿನಲ್ಲಿ ವಿಚಾರಿಸಿಕೊಳ್ಳಬಹುದಾಗಿತ್ತಲ್ಲ? ಹೋಗಿ ಹೋಗಿ ಇವನಿಗೆ ಮಲ್ಲೂರೆ ಬೇಕಾಗಿತ್ತೆ? ಅದೂ ಚಾದಂಗಡಿ ಅಂಗಳವೆ ಬೇಕಾಗಿತ್ತೆ? ಯಾವ ವಿಧಿ ಸುಭಾಸನ ಬೆನ್ನು ಬಿದ್ದಿತ್ತೊ ಏನೋ? ನಾಲ್ಕೆದು ದಿನಗಳ ಹಿಂದೆಯಷ್ಟೆ ಹೊಟೇಲಿಗೆ ಬಂದಿದ್ದ. ಅವತ್ತೂ ದುರ್ಗಪ್ಪನಿಗೆ ಸಾಲದ ನೆನಪು ಮಾಡಿದ್ದನಂತೆ. ಒಮ್ಮೆಲೆ ಸಾಲ ತೀರಿಸು ಎಂದರೆ ದುರ್ಗ ಕೂಡ ಹೇಗೆ ತೀರಿಸಬೇಕು? ಯಾರಿಗಾದರೂ ಸ್ವಲ್ಪ ಸಮಯ ಕೊಡಬೇಕೊ? ಬೇಡವೋ? ದುರ್ಗನಿಗಂತೂ ಬುದ್ಧಿಯಿಲ್ಲ. ಕಂಡಕ್ಟರನಿಗಾದರೂ ಬುದ್ಧಿ ಬೇಡವೆ?



ಕಂಡಕ್ಟರ್ ಎಷ್ಟೋ ಜನರ ಕಷ್ಟಕ್ಕೆ ಆಗಿದ್ದ. ಅಗದೀ ತುರ್ತು ಸಮಯದಲ್ಲಿ ಸಾಲ ಕೊಡುತ್ತಿದ್ದ. ಒಬ್ಬೊಬ್ಬರು ಗುಪ್ತವಾಗಿ ಹೀಗೂ ಹೇಳುತ್ತಿದ್ದರು. ‘ಅಂವ ಇತ್ತೀಚೆಗೆ ತನ್ನ ದುಡ್ಡಷ್ಟೇ ಅಲ್ಲ, ಅನಸವ್ವನ ದುಡ್ಡು ಸೈತ ಬಡ್ಡಿಗೆ ಕೊಡ್ತಾನು ತಗೋ. ಆಕೀ ಗಂಡನ ಕಣ್ಣ ತಪ್ಪಿಸಿ ದುಡ್ಡು ಹೊಡೀತಾಳು. ಕದ್ದ ದುಡ್ಡು ಕಂಡಕ್ಟರನ ಕಡೆ ದುಡಿತಿರ್ತದ. ಆಕೀನೂ ಕಡಿಮೆಯಿಲ್ಲ. ಪಕ್ಕಾ ಅದಾಳ. ಕಂಡಕ್ಟರನ ರೊಟ್ಟಿ ಜಾರಿ ತುಪ್ಪದಾಗ ಬಿದ್ದಿತ್ತು. ಆದರ ಆಶ್ಚರ್ಯದ ಮಾತಂದ್ರ ಕಂಡಕ್ಟರನ ಹೊಡಿಯೋಮುಂದ ಅನಸವ್ವ ಬಂದು ಅಂವನ್ನ ಉಳಿಸಬೇಕಾಗಿತ್ತು. ನಾವು ಇಲ್ಲಿ ಕುಂತು ಹೀಂಗ ಮಾತಾಡಲಿಕ್ಕೆ ಹತ್ತೇವಿ. ಆದರ ಖರೆ ಖರೆ ನಡೆದಿದ್ದು ಏನೈತೇನೊ?’

ಕೊಲೆ ಮಾಡಿದವರು ಒಂದಲ್ಲ ಒಂದು ದಿನ ಸಿಕ್ಕಿಬೀಳದಿರುತ್ತಾರೆಯೇ ಎಂದು ಮಾತಾಡುತ್ತಿದ್ದಾಗಲೇ ದುರ್ಗಪ್ಪ ತಾನೇ ಕೊಂದಿದ್ದು ಎಂದು ಅಪರಾಧವನ್ನು ಒಪ್ಪಿಕೊಂಡಿದ್ದಾನೆಂಬ ಸುದ್ದಿ ಬಂದಿತು. ಪೋಲಿಸರ ಮುಂದೆ ಮತ್ತು ಸೇರಿದ ಜನಸಾಗರದೆದುರು ಆತ ಹೇಳಿದ್ದು ಜನರ ಕಿವಿಯಲ್ಲಿ ಗಂವ್‌ಗುಟ್ಟಿತು. ‘ಹೌದು. ಕಂಡಕ್ಟರನನ್ನ ನಾನೇ ಕೊಂದೇನಿ. ಅಂವದು ಉರವಣಿಗೆ ಭಾಳ ಆಗಿತ್ತು. ಸಾಲದ ಸಲುವಾಗಿ ಏನೇನೊ ಕೆಟ್ಟ ಮಾತಾಡಿದ. ಸಾಲ ಇವತ್ತು ತಿರುಗಿ ಕೊಡಲಿಲ್ಲಂದ್ರ ನಾ ಜೀವಂತ ಇರೋದು ಕಷ್ಟ ಐತಿ ಅಂದ. ಅದಕ್ಕ ಅಂವಗ ಹೇಳಿದೆ. ‘ಏನೊ, ಎಷ್ಟು ಮಾತಾಡ್ತಿ? ನಿನಗ ರೊಕ್ಕದ ಸೊಕ್ಕು ಬಂದೇತಿ. ನಾ ಜೀವಂತ ಉಳಿತೇನೋ ಇಲ್ಲಾ ನೀ ಜೀವಂತ ಉಳಿತೀಯೋ? ನೋಡೋಣು’ ಅಂತ ಅಲ್ಲೆ ಕಟ್ಟಿಮ್ಯಾಲೆ ಇದ್ದಂತಹ ಕುಡುಗೋಲಿಲೆ ಬೀಸಿದೆ ನೋಡ್ರಿ. ಸಾಕಾಗಿತ್ತು ಆ ಮಗಂದು.’

(ಸಶೇಷ)